ಶಶಿಕುಮಾರ್ ಸದ್ಯ ಕೆನಡಾದ ಆಲ್ಬರ್ಟಾ ವಿಶ್ವವಿದ್ಯಾಲಯದಲ್ಲಿ ಕರ್ನಾಟಕದ ದಲಿತ ಸಾಹಿತ್ಯ ಮತ್ತು ದಲಿತ ಚಳವಳಿಯ ಇತಿಹಾಸದ ಕುರಿತು ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರೆ. ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್‌ನಲ್ಲಿ ಸಂಪಾದಕರಾಗಿ ಭಾರತೀಯ ಭಾಷೆಗಳ ಸಾಹಿತ್ಯ ಕೃತಿಗಳ ಅನುವಾದ ಯೋಜನೆಗಳನ್ನು ನಿರ್ವಹಿಸಿದ್ದಾರೆ. ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ ಹಾಗೂ ರಾಷ್ಟ್ರೀಯ ಅನುವಾದ ಮಿಷನ್‌ನಲ್ಲಿ ಕೆಲಸ ಮಾಡಿ ರಾಷ್ಟ್ರೀಯ ಅನುವಾದ ಯೋಜನೆಗಳನ್ನು ನಿರ್ವಹಿಸಿದ ಅನುಭವವನ್ನು ಹೊಂದಿದ್ದಾರೆ.

ರಾಜಕೀಯ ಚಿಂತನೆಯ ಮೇಲೆ ಹಿಡಿತ ಸಾಧಿಸಲು ಹೆಣಗಾಡುತ್ತಿದ್ದೆ. ಆದರೆ, 2011ರ ಆರಂಭದಲ್ಲಿ ನಾನು ಅಂಬೇಡ್ಕರ್‌ರವರನ್ನು ಕೇವಲ 'ವಸಾಹತುಶಾಹಿ ಅನ್ಯ'ರಾಗಿ ಮಾತ್ರವಲ್ಲದೆ, 'ವಸಾಹತುಶಾಹಿ ಅನ್ಯ'ರಲ್ಲಿಯೇ ಅನ್ಯರಾದ ಚಿಂತಕರಿಗೆ ಟೆಸ್ಟ್ ಕೇಸ್ ರೀತಿ ಅಧ್ಯಯನ ಮಾಡಲಾರಂಭಿಸಿದೆ. ಅಂಬೇಡ್ಕರ್, ತಮ್ಮನ್ನು ತಾವು ವಸಾಹತುಶಾಹಿ ಭೇದದ ಮೇಲೆ ಸ್ಥಾಪಿಸಿಕೊಂಡ ವ್ಯಕ್ತಿ ಮಾತ್ರವಲ್ಲ, ಆ ಭೇದವನ್ನು ಅಂಚುಗಳಿಂದ ಸಹ ನೋಡಿದವರು. ಅಲ್ಲಿ ನೆಲೆ ಕಾಣುತ್ತಲೇ ಅವರು ರಾಜಕೀಯದ ಹೊರಗೆರೆಗಳನ್ನು ಹೊಸದಾಗಿ ವ್ಯಾಖ್ಯಾನಿಸಲು ಪ್ರಯತ್ನಿಸುತ್ತಾ, ಮಾನವೀಯತೆಯನ್ನು ಉದ್ದೇಶಿಸಿ ಸ್ಪಷ್ಟವಾಗಿ ಮಾತನಾಡುತ್ತಿದ್ದರು.

ಎರಡನೆಯ ಸವಾಲು, ಪುಸ್ತಕದ ರಚನೆಯನ್ನು ಅನುಕ್ರಮಗೊಳಿಸುವುದಾಗಿತ್ತು. ಅಂಬೇಡ್ಕರ್‌ರವರ ಕುರಿತಾದ ಇದುವರೆಗಿನ ಕೃತಿಗಳಲ್ಲಿ ಹೆಚ್ಚಿನವು ಜೀವನ ಚರಿತ್ರೆಯಾಗಿದ್ದವು, ಕೆಲವಷ್ಟೇ ಬೌದ್ಧಿಕ ಇತಿಹಾಸವನ್ನು ರಚಿಸುವ ಕೆಲಸ ಮಾಡಿದ್ದವು. ಆದರೆ, ಆ ಮಾರ್ಗವು ನನಗೆ ತೆರೆದುಕೊಂಡಿರಲಿಲ್ಲ: ಅಂತಹ ಪ್ರಕಾರದ ಕೆಲಸದಲ್ಲಿ ನನಗೆ ಯಾವುದೇ ಸಾಮರ್ಥ್ಯವಿರಲಿಲ್ಲ. ಒಂದು ವೇಳೆ ನಾನು ಹಾಗೆ ಮಾಡಿದರೂ ಸಹ, ಅದು ಮೇಲೆ ವಿವರಿಸಿದ ನನ್ನ ದೃಷ್ಟಿಕೋನಕ್ಕೆ ಸೂಕ್ತವೂ ಆಗಿರಲಿಲ್ಲ. ನನಗೆ ಭೇದವನ್ನು ಒಳಗೊಂಡ ಸಮುದಾಯಗಳ ಅಂಚಿನ ಸಮುದಾಯಗಳ ಧ್ವನಿಯನ್ನು ಪ್ರತಿನಿಧಿಸುವ ವಾದವೊಂದನ್ನು ಮುಂದಿಡುವುದು ಮುಖ್ಯವಾಗಿತ್ತು, ಅದೂ ಒಂದು ಪುಸ್ತಕವಿಡೀ ಬೆಳೆಸುವಷ್ಟು ಸುದೀರ್ಘವಾದ ವಾದ. ನನಗೆ, ಪುಸ್ತಕವೆಂದರೆ ಅದರ ಬಿಡಿ ಭಾಗಗಳ ಮೊತ್ತವಷ್ಟೇ ಅಲ್ಲ. ಅದು ಒಂದು ಸಮಗ್ರ ಏಕತೆಯನ್ನು ಹೊಂದಿದ್ದು, ಅದರ ಬೇರೆಬೇರೆ ಭಾಗಗಳನ್ನು ಒಂದು ಸಾಮಾನ್ಯ ಮಡಿಕೆಗೆ ಕಟ್ಟಲು ಶ್ರಮಿಸುತ್ತದೆ. ಅಂತಹ ಪ್ರಯತ್ನ ಯಾವಾಗಲೂ ಯಶಸ್ವಿಯಾಗದಿರಬಹುದು, ಅಥವಾ ವಿಭಿನ್ನ ಎಳೆಗಳು ಮತ್ತು ಧ್ವನಿಗಳು ಭಿನ್ನಾಭಿಪ್ರಾಯಗಳನ್ನು ಉಂಟುಮಾಡಬಹುದು. ನನ್ನ ಸ್ವಂತ ಅಧ್ಯಯನದ ಆಧಾರದ ಮೇಲೆ ಹೇಳುವುದಾದರೆ, ರಾಜಕೀಯ ಸಿದ್ಧಾಂತದ ಪುಸ್ತಕವು ಒಂದು ಸಮಗ್ರ ವಾದವನ್ನು ಮುಂದಿಡುತ್ತದೆ, ಅದರ ವಿಭಿನ್ನ ಭಾಗಗಳಲ್ಲಿ ಅನುಸರಿಸಲಾದ ಪ್ರತ್ಯೇಕ ವಾದಗಳನ್ನು ಒಟ್ಟುಗೂಡಿಸುತ್ತದೆ, ಸುಸಂಬದ್ಧತೆ ಮತ್ತು ಸ್ಥಿರತೆಯನ್ನು ಸ್ಥಾಪಿಸುತ್ತದೆ. ಅದಕ್ಕಾಗಿಯೇ ನಾನು ಅಂಬೇಡ್ಕರ್‌ರವರ ಬೃಹತ್ ಬರಹಗಳನ್ನು ನನ್ನ ಕಚ್ಚಾಸಾಮಗ್ರಿಯಾಗಿ ಪರಿಗಣಿಸಬೇಕು ಮತ್ತು ಅವುಗಳನ್ನು ತಿಳಿಸುವ ಆಂತರಿಕ ತಾರ್ಕಿಕತೆಯನ್ನು ಅನ್ವೇಷಿಸಬೇಕು ಅಂದುಕೊಂಡೆ.

ನನ್ನ ಸಂಶೋಧನಾ ಪ್ರಯತ್ನವು ಅಂಬೇಡ್ಕರ್‌ರವರ ಜ್ಞಾನಮೀಮಾಂಸೆಯ ನಿಲುವನ್ನು ಅನ್ವೇಷಿಸುವ ಮತ್ತು ಅವರ ರಾಜಕೀಯದ ಸಿದ್ಧಾಂತದ ತಳಹದಿಯ ಪರಿಕಲ್ಪನೆಗಳನ್ನು ವಿಮರ್ಶಿಸುವ ದಾರಿ ಹಿಡಿಯಿತು. ಅವರ ಒಟ್ಟಾರೆ ಕೆಲಸದಲ್ಲಿ, ಮಾನವನ ಕುರಿತ ಪರಿಕಲ್ಪನೆಯು ಬೃಹತ್ ಸ್ವರೂಪ ಪಡೆದುಕೊಂಡಿರುವುದನ್ನು ನಾನು ಕಂಡುಕೊಂಡೆ, ಅದು ಅವರ ಚಿಂತನೆಯ ಮೂಲಾಧಾರವೆಂದೆನಿಸಿತು. ಈ ಪರಿಕಲ್ಪನೆಯೇ ಅಂಬೇಡ್ಕರ್‌ರವರ ಆಧಾರ ಸ್ತಂಭವೆಂಬುದನ್ನು ಕಂಡುಕೊಂಡಾಗ– ಪ್ರಚಲಿತ ಸಾಮಾಜಿಕ ವ್ಯವಸ್ಥೆ, ನ್ಯಾಯೋಚಿತತೆಯ ಹಕ್ಕೊತ್ತಾಯ, ಅದಕ್ಕೆ ಪೂರವಾದ ಪ್ರಾತಿನಿಧಿತ್ವ ಮತ್ತು ಅದೆಲ್ಲವನ್ನು ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಮುಂದುವರಿಸುವ ಸಾಧನಗಳಾದ ಸಾಂವಿಧಾನಿಕತೆ ಹಾಗೂ ಮತಧರ್ಮ– ಸುಸಂಘಟಿತ ವಾದಕ್ಕೆಡೆ ಮಾಡಿದವು. ಆ ವಾದವನ್ನು ಕೆಳಕಂಡ ಪ್ರಶ್ನೆಗಳನ್ನು